C.C. No.- 2614/2024
CW-03/ PW-01

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ
ನ್ಯಾಯಾಲಯ, ಗಂಗಾವತಿ

ಸಾಕ್ಷಿಯನ್ನು ದಿನಾಂಕ-13-08-2025 ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.

**C.C. No.- 2614/2024**

| | |
|---|---|
| ಸಾಕ್ಷಿದಾರರ ಹೆಸರು- | ಬಸವರಾಜ |
| ತಂದೆ / ಗಂಡನ ಹೆಸರು- | ಮಲ್ಲಪ್ಪ |
| ವಯಸ್ಸು- | 41 ವರ್ಷಗಳು |
| ಉದ್ಯೋಗ- | ಹೋಮ್‌ಗಾರ್ಡ ಕೆಲಸ |
| ವಾಸಸ್ಥಳ- | ಗಂಗಾವತಿ |

ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ-

ದಿ:30-04-2024 ರಂದು ರಾತ್ರಿ ನಾನು ಲೋಕಾಸಭಾ ಚುನಾವಣೆ ನಿಮಿತ್ಯ ಅಬಕಾರಿ ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ, ಚಾಸಾ-1 ರವರಿಗೆ ಬಸಾಪಟ್ಟಣದ ಬಸ್ ಸ್ಟ್ಯಾಂಡ್ ಹತ್ತಿರ ಚುನಾವಣೆ ನೀತಿ ಸಂಹಿತೆ ಜಾರಿ ಇದ್ದ ಕಾರಣ ಕಳ್ಳತನದಿಂದ ಮೋಟಾರ ಸೈಕಲ್ ಮೇಲೆ ಸಾರಾಯಿ ತೆಗೆದುಕೊಂಡು ಹೋಗುತ್ತಿದ್ದಾಗ ಅಂತಾ ಬಾತ್ಮಿ ಬಂದಿರುತ್ತದೆ. ನಂತರ ಬಸಾಪಟ್ಟಣದ ಬಾತ್ಮಿ ಸ್ಥಳದ ಹತ್ತಿರ ನಾನು, ಚಾಸಾ-1, 2 ಹಾಗೂ ಅಬಕಾರಿ ಸಿಬ್ಬಂದಿ ಮುನಿಸ್ವಾಮಿ ಎಲ್ಲರು ಸೇರಿಕೊಂಡು ಇಲಾಖಾ ವಾಹನದಲ್ಲಿ ಠಾಣೆಯಿಂದ ರಾತ್ರಿ 9-20 ಕ್ಕೆ ಠಾಣೆಯಿಂದ ಹೊರಟು ಬಾತ್ಮಿ ಬಂದ ಸ್ಥಳದ ಹತ್ತಿರ ರಾತ್ರಿ 10-20 ಕ್ಕೆ ಹೋಗಿರುತ್ತೇವೆ. ಬಾತ್ಮಿ ಬಂದ ಸ್ಥಳದ ಹತ್ತಿರ ಸ್ವಲ್ಪ ದೂರದಲ್ಲಿ ವಾಹನವನ್ನು ಮರೆಯಲ್ಲಿ ನಿಲ್ಲಿಸಿ ಹೋಗಿ ಬರುವ ಬೈಕಗಳನ್ನು ತಪಾಸಣೆ ಮಾಡುತ್ತಿದ್ದಾಗ, ಒಬ್ಬ ವ್ಯಕ್ತಿಯ ಸ್ಪೆಂಡರ್ ಸೀಲ್ವರ ಬಣ್ಣದ ಮೋಟಾರ ಸೈಕಲ್ ಮೇಲೆ ಬಿಳಿ

ಚೀಲದಲ್ಲಿ ಮದ್ಯ ಇಟ್ಟುಕೊಂಡು ಬರುವುದು ಕಂಡು ಬಂತ್ತು. ನಂತರ ನಾವೇಲ್ಲರೂ ಸೇರಿ ಅವನ್ನು ತಡೆದು ನಿಲ್ಲಿಸಿ ಹೆಸರನ್ನು ವಿಚಾರಿಸಲಾಗಿ ಅವನು ಹೆದರಿಕೆಯಿಂದ ನಿಂಗಪ್ಪ ಅಂತಾ ತಿಳಿಸಿದನು. ನಂತರ ಪಂಚರ ಸಮಕ್ಷಮ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ ಓರಿಜನಲ್ ಚಾಯ್ಸ್ನ 192 ಟೇಟ್ರಾ ಪಾಕೆಟಗಳು ಇದ್ದವು. ನಂತರ ಅವುಗಳ ಜೊತೆಗೆ ವ್ಯಕ್ತಿಯನ್ನು ಠಾಣೆಗೆ ಬಂದಿರುತ್ತೇವೆ. ಆರೋಪಿಯನ್ನು ನೋಡಿದರೆ ಗುರುತಿಸಲು ಆಗುತ್ತದೆ. ಮುದ್ದೆಮಾಲುವನ್ನು ಗುರುತಿಸುತ್ತೇನೆ. ಸ್ಥಳದಲ್ಲಿದ್ದ ಜನರನ್ನು ಚಾಸಾ-1 ಪಂಚನಾಮೆಗೆ ಸಹಿ ಮಾಡಲು ಕರೆದರು. ಅವರು ಬರಲಿಲ್ಲ. ಆ ಕಾರಣ ಪಂಚನಾಮೆಗೆ ನನ್ನ ಸಹಿ ಪಡೆದರು. ಸಾಕ್ಷಿಯು ಪಂಚನಾಮೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಪಂಚನಾಮೆಯನ್ನು <u>ನಿಪಿ-1 ಎಂದು, ಸಹಿಯನ್ನು ನಿಪಿ-1 ಎ ಎಂದು</u> ಗುರುತಿಸಲಾಯಿತು.

**(ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಕಾಲವಾಕಾಶ ಕೋರಿದ್ದು ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಗಂಗಾವತಿ